 ISSN : 2583-2948

-ಡಾ. ಶೋಭಾ ನಾಯಕ
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ,
ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
ಇಮೇಲ್: shobhan535@gmail.com

# ಶಯ್ಯಾಗೃಹದ ಸುದ್ದಿಗಳು

ಅವರೊಂದಿಗೆ ಎದ್ದೆ

ಇವರೊಂದಿಗೆ ಮಲಗಿದೆ

ಮತ್ತೊಬ್ಬರೊಂದಿಗೆ ಇನ್ನೇನೋ...

ನನ್ನ ಶಯ್ಯಾಗೃಹವೊಂದು

ಕೆಲವರ ಕುತೂಹಲ ಮೂಲ!

ದೇಹದೊಂದಿಗೆ ದೇಹ ಬೆರೆತು

ಮೌನ ಘನೀಕರಿಸಿದ ಆ ಕ್ಷಣ

ಯಾರಿಗೂ ಸಂಬಂಧಿಸಿದ್ದಲ್ಲ

ನನ್ನ ಅರಮನೆ

ನನ್ನ ರಾಜಕುಮಾರ

ಕೇವಲ ನನಗೆ ಮಾತ್ರ

ಅವರಿಗೋ ನನ್ನದೇ

ಚಿಂತೆ : ರೂಪ, ಬಣ್ಣ, ಧಿರಿಸು,

ಹಾವ ಭಾವ ಅಷ್ಟೆ ಏಕೆ ?

ತುಟಿಯ ಗಾಯ, ಮುತ್ತಿನ ಕಲೆ

ಮಾತಿನ ಬಳಕು

ಮತ್ತೆ ಮತ್ತೆ ಇಣುಕಿ, ಕೆಣುಕಿ

ಮೈಯೆಲ್ಲ ಪರಚಿಕೊಳ್ಳುವ ಅವರು

ನನ್ನನ್ನು ಅನುಕರಿಸುತಾ, ಅನುಸರಿಸಿಸುತಾ

ಅಕಾರಣ ದ್ವೇಷಿಸುವ ಇವರೂ

ನನಗೆ ಕೊಟ್ಟ ಗೌರವ ಇದೆನ್ನಲೇ?

ನನ್ನ ಅವನ ಕಣ್ಣುಗಳು ಕಲೆತು

ನಮ್ಮಿಬ್ಬರಿಗೆ ಮಾತ್ರ ತಿಳಿಯುವ

ಸಂಭಾಷಣೆ

ಕಣ್ಣು ತೆರೆದು ನೋಡುವ ಎಲ್ಲರಿಗೂ

ಅರ್ಥವಾದೀತು

ಆದರೂ

ಶಯ್ಯಾಗೃಹದ ಸುದ್ದಿಗಳು

ಇನ್ನೊಬ್ಬರ ಬಾಯಿಯ

ತಾಂಬೂಲವಾಗುವುದು

ಅವರವರ ಶಯ್ಯಾಗೃಹಗಳು ಶವಾಗಾರಗಳಾದಾಗ.